ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ರಿವಾಜು ಚೌಕಟ್ಟುಗಳನು ಮುರಿಯುತ್ತ, ಮೀರುತ್ತ...

ಜನ ತಮ್ಮ ಮನೆ, ಅಡುಗೆಮನೆ, ಊಟ ಮತ್ತು ಜೀವನ ಶೈಲಿಯನ್ನು ಹಂಚಿಕೊಳ್ಳಲು ತಯಾರಾದಾಗಲೇ ಅವರ ಸಮಸ್ಯೆಗಳ ಸೂಕ್ಷ್ಮಗಳು ಅರ್ಥವಾಗುತ್ತವೆ ಎನ್ನುವುದು ಗೀತಾ ರಾಮಸ್ವಾಮಿ ಅವರ ಜೀವನದಿಂದ ವೇದ್ಯವಾಗುತ್ತದೆ. ಅವರ ನೆನಪುಗಳ ಕಥನ ನಮ್ಮ ಕಣ್ಣು ತೆರೆಸುತ್ತದೆ, ಸಂಭ್ರಮಿಸಲು ಪ್ರೇರೇಪಿಸುವುದಿಲ್ಲ.

ಆತ್ಮಕಥೆಯನ್ನು ಬರೆಯಲು ಸರಿಯಾದ ಕಾಲಘಟ್ಟ ಯಾವುದು ಎಂದು ಯೋಚಿಸಿದಾಗ ನಮಗೆ ಹೊಳೆಯಬಹುದಾದ್ದು ಎರಡು ಸಾಧ್ಯತೆಗಳು. ಯಾವುದೇ ಒಂದು ಸಾಧನೆಯ ನಂತರ, ಅಥವಾ ನಿವೃತ್ತಿಯತ್ತ ಹಜ್ಜೆಯಿಟ್ಟಾಗ. ಆಗ ಜೀವನವನ್ನು ಹಿಂದಿರುಗಿ ನೋಡಲು, ಆತ್ಮಾವಲೋಕನ ಮಾಡಿಕೊಳ್ಳಲು, ಕಲಿತ ಪಾಠಗಳ ಮೌಲ್ಯಮಾಪನ ಮಾಡಿಕೊಳ್ಳಲು ಅದೇ ಸರಿಯಾದ ಕಾಲಘಟ್ಟವಿರಬಹುದು. ಅಂದರೆ, ನೆನಪುಗಳನ್ನು ದಾಖಲಿಸುವಂತಹ ಬರವಣಿಗೆಗೂ ಒಂದು ಚೌಕಟ್ಟು ಹಾಕಿಕೊಡುತ್ತಿದ್ದೇವೆ ಎಂದಾಯಿತು. ಆದರೆ, ಬದುಕಿನ ಬರವಣಿಗೆಗೆ ಈ ರೀತಿಯ ಚೌಕಟ್ಟು ಬೇಕೇ? ಈ ಪ್ರಶ್ನೆಯನ್ನು ಗೀತಾ ರಾಮಸ್ವಾಮಿಯವರ ಈಚಿನ ಪುಸ್ತಕ 'ಲ್ಯಾಂಡ್ ಗನ್ಸ್ ಕಾಸ್ಟ್ ಉಮನ್' ಕೇಳುತ್ತದೆ.

ದಲಿತ ದಮನಿತ ವರ್ಗಗಳ ನಡುವೆ ಕೆಲಸ ಮಾಡುವವರು ಸಾಮಾನ್ಯತಃ ನಿರ್ದಿಷ್ಟ ವಿಚಾರಧಾರೆ ಮತ್ತು ಅದಕ್ಕೆ ತಕ್ಕ ಪದ್ಧತಿಗಳನ್ನು ಅನುಸರಿಸಿ ಒಂದು ವಿಶಾಲವಾದ ಚೌಕಟ್ಟನ್ನು ಹಾಕಿ ಹೊರಡುತ್ತಾರೆ ಎನ್ನುವ ನಂಬಿಕೆ ಹೊತ್ತವರಿಗೆ ಈ ಪುಸ್ತಕ ಆಶ್ಚರ್ಯವನ್ನುಂಟು ಮಾಡುವ ಸವಾಲುಗಳನ್ನೊಡ್ಡುತ್ತದೆ. ಹೀಗಾಗಿಯೇ ಈ ಪುಸ್ತಕ ಮತ್ತು ಪುಸ್ತಕದ ಲೇಖಕರ ಜೀವನ ಎರಡೂ ಆಸಕ್ತಿಕರವಾಗಿವೆ. ಇದು ಖುಷಿಯ ಪುಸ್ತಕವೇನೂ ಅಲ್ಲ. ಇದರಿಂದ ಮನಸ್ಸು ಪ್ರಫುಲ್ಲಗೊಳ್ಳುವುದಿಲ್ಲ. ಬದಲಿಗೆ ಇದು ತೀವ್ರ ಚಿಂತನೆಗೆ, ಮತ್ತು ಒಂದು ಮಟ್ಟದ ಅಸಹಾಯಕತೆಯತ್ತ ನಮ್ಮನ್ನು ಒಯ್ಯುತ್ತದೆ. ಗೀತಾ ತಮ್ಮ ನೆನಪುಗಳನ್ನು ಬಿಚ್ಚಿಡುವ ಮೂಲಕ ಒಂದು ಸಮುದಾಯದ ಹೋರಾಟ, ಆಶೋತ್ತರ ಮತ್ತು ಅಸಹಾಯಕತೆಯನ್ನು ಬಿಚ್ಚಿಡುತ್ತಾರೆ. ಹೊರಗಿನಿಂದ ಬಂದ, ಭಾಷೆ ಬಾರದ, ಸವರ್ಣ ವರ್ಗದ ಮಹಿಳೆ, ದಲಿತರೊಂದಿಗೆ ಬೆಸೆದು ಅವರೊಳಗೊಬ್ಬರಾಗಿ ಹೋರಾಡುವುದು ಸರಳವಾದ ಮಾತೇನೂ ಅಲ್ಲ. ಆದರೂ ಅವರಲ್ಲೊಬ್ಬರಾಗಿ ಸಂವೇದನಾಶೀಲವಾಗಿ ಸಮಸ್ಯೆಗಳ ಪರಿಹಾರದತ್ತ ಗೀತಾ ಕೆಲಸ ಮಾಡುತ್ತಾರೆ.

ಬಡವರ, ದಲಿತರ, ಆದಿವಾಸಿಗಳ ಮತ್ತು ಇತರ ಶೋಷಿತ ವರ್ಗಗಳ ಹಕ್ಕು, ಆಶೋತ್ತರಗಳನ್ನು ಸಾಧಿಸಹೊರಟಿರುವ ಹೊರಗಿನ ಜನರ ಹಲವು ಉದಾಹರಣೆಗಳು ನಮಗೆ ಸಿಗುತ್ತವೆ. ಅಲ್ಪಾ ಶಾ ಬರೆದಿರುವ 'ನೈಟ್‌ಮಾರ್ಚ್' ಪುಸ್ತಕದಲ್ಲಿ ಅವರು ಒಂದು ವಾರಕಾಲ ಜಾರ್ಖಂಡ್‌ನ ನಕ್ಸಲೀಯರ ಜೊತೆಗೆ ಕಳೆಯುತ್ತಾರೆ. ಆ ಪುಸ್ತಕವನ್ನು ಗಮನಿಸಿದಾಗ ಒಂದು ವಿಚಾರಧಾರೆಯನ್ನು ಹೊತ್ತು ಮೂಲಭೂತವಾಗಿ ವ್ಯವಸ್ಥೆಯನ್ನು ಬದಲಾಯಿಸಲು ಹೊರಟ ಜನರ